Acute Shortage of drinking water in Malleswaram, Rajajinagar and Kumarapark Areas

ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ನಾನು ಒಂದು ನೋಟೀಸ್ ಕಳಿಸಿದ್ದೇನೆ. ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಬೆಂಗಳೂರು ನಗರದಲ್ಲಿ ಮಲ್ಲೇಶ್ವರ, ಕುಮಾರಾಪಾರ್ಕ್, ರಾಜಾಜಿನಗರ ಈ ಪ್ರದೇಶದಲ್ಲೆಲ್ಲಾ ಕುಡಿಯುವ ನೀರು ಬರದೇ ಜನರು ಬಹಳ ತೊಂದರೆಪಡುತ್ತಿದ್ದಾರೆ. ಜನ ನನ್ನನ್ನು ಬಂದು ಮನೆ ಹತ್ತಿರ ಛೇರಾವೋ ಮಾಡುತ್ತಿದ್ದಾರೆ. ತಿಪ್ಪಗೊಂಡನಹಳ್ಳಿ ಕೆರೆಯಲ್ಲಿ ನೀರಿಲ್ಲ. ಆದ್ದರಿಂದ ಇಲ್ಲೆಲ್ಲಾ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಇದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ತಮ್ಮ ನೋಟೀಸಿಗೆ ಉತ್ತರ ಕೊಟ್ಟಿದ್ದೇನೆ. ಅದು ತಮಗೆ ಬರುತ್ತದೆ.

ಶ್ರೀ ಪಿ. ರಾಂದೇವ್.—ಜನ ನನ್ನನ್ನು ಛೇರಾವೋ ಮಾಡುತ್ತಿದ್ದಾರೆ. ನಾನು ಚರ್ಚೆ ಮಾಡಬೇಕು ಎಂಬ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಸಮಸ್ಯೆ ಪರಿಹಾರ ಆಗಬೇಕು.

ಅಧ್ಯಕ್ಷರು.—ತಾವು ಈ ರೀತಿ ಮಾಡಿದರೆ ಹೇಗೆ ? ನೀವು ನಡೆದುಕೊಳ್ಳುತ್ತಿರುವ ರೀತಿ ಸರಿಯಲ್ಲ.

ಶ್ರೀ ಪಿ. ರಾಂದೇವ್.—ನೀವು ಅವಕಾಶ ಕೊಡದೇ ಇದ್ದರೆ ನಾನು ಧರಣಿ ಹೂಡಬೇಕಾಗುತ್ತದೆ.

ಅಧ್ಯಕ್ಷರು.—ನಾನು ಇಷ್ಟು ಹೇಳಿದರೂ ನೀವು ಧರಣಿ ಕುಳಿತುಕೊಳ್ಳುತ್ತೇನೆ ಎಂದು ಹೇಳಿದರೆ ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸದಸ್ಯರಿಗೆ ತಿಳಿವಳಿಕೆ ಹೇಳಿ.

(ಶ್ರೀ ಪಿ. ರಾಂದೇವ್ ಅವರು ಅಧ್ಯಕ್ಷ ಪೀಠದ ಮುಂಭಾಗದಲ್ಲಿರುವ ಜಾಗದಲ್ಲಿ ಬಂದು ಧರಣಿ ಹೂಡಿದರು)

ಶ್ರೀ ಟಿ.ಆರ್ ಶಾಮಣ್ಣ.—ತಾವು ವೈಯಕ್ತಿಕ ಕುಂದು ಕೊರತೆಗಳಿದ್ದರೆ ನನ್ನ ಹತ್ತಿರ ಬಂದು ತಿಳಿಸಿ ಎಂದು ಹೇಳಿದಿರಿ. ಕುಡಿಯುವ ನೀರಿನ ಸಮಸ್ಯೆ ಸಾರ್ವಜನಿಕರಿಗೆ ಸಂಬಂಧಪಟ್ಟದ್ದು. ಇದು ವ್ಯಕ್ತಿಗೆ ಸಂಬಂಧಪಟ್ಟಿದ್ದಲ್ಲ.

ಅಧ್ಯಕ್ಷರು.—ನಿಯಮಾವಳಿ ಪ್ರಕಾರ ಒಂದು ಸಾರಿ ಒಂದು ವಿಷಯ ಚರ್ಚೆ ಆದಮೇಲೆ ಮತ್ತೆ ಅದನ್ನು ಅದೇ ಅಧಿವೇಶನದಲ್ಲಿ ಚರ್ಚೆಗೆ ತೆಗೆದುಕೊಳ್ಳಬಾರದು ಎಂದು ಇದೆ. ಆದ್ದರಿಂದ ನಾನು ಮತ್ತೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಟಿ.ಆರ್. ಶಾಮಣ್ಣ.—ಪದೇ ಪದೇ ಪರಿಸ್ಥಿತಿ ಕಠಿಣವಾಗುತ್ತಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ತಪ್ಪಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಬಹಳ ಮುಖ್ಯವಾದ ವಿಚಾರವಾದರೆ ನಾನು ಪರಿಶೀಲನೆ ಮಾಡುತ್ತೇನೆ. ನನ್ನ ಛೇಂಬರ್‌ಗೆ ಬಂದು ನನ್ನ ಹತ್ತಿರ ಹೇಳಲಿ. ಅದನ್ನು ಬಿಟ್ಟು ಇಲ್ಲಿ ಧರಣಿ ಕುಳಿತುಕೊಂಡು ಮನೆಯ ಸಮಯವನ್ನು ವ್ಯರ್ಥಮಾಡುವುದು ಸರಿಯಾದುದಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ನಮಗೆ ಮಾತನಾಡುವುದಕ್ಕಿಂತ ಪರಿಹಾರ ಮುಖ್ಯ. ಸಮಸ್ಯೆ ಪರಿಹಾರವಾದರೆ ಸಾಕು.

MR. SPEAKER.—The Hon'ble Minister will take note of the matter. Let the hon. member see me in my chambers and let him ventilate his grievances. I will invite the Hon'ble Minister also to my chambers. I appeal to the hon. member to go back to his seat.

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಮಾನ್ಯ ಸದಸ್ಯರು ನನ್ನ ಗಮನಕ್ಕೆ ವಿಷಯವನ್ನು ತಂದಿದ್ದರೆ ಸಾಕಾಗಿತ್ತು, ನಾನು ಅದನ್ನು ನೋಡುತ್ತಿದ್ದೆ. ಅದನ್ನು ಬಿಟ್ಟು ಈ ರೀತಿ ಧರಣಿಯನ್ನು ಏತಕ್ಕೆ ಕುಳಿತಿದ್ದಾರೋ ಗೊತ್ತಾಗಲಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರು ತಮ್ಮ ಛೇಂಬರ್‌ಗೆ ಮಾನ್ಯ ಸದಸ್ಯರನ್ನು ಮತ್ತು ಮಂತ್ರಿಗಳನ್ನು ಕರೆಸಿ ಯಾವ ಯಾವ ಜಾಗದಲ್ಲಿ ನೀರಿನ ಸಮಸ್ಯೆ ಇದೆ ಎಂದು ಹೇಳುತ್ತಿದ್ದಾರೊ ಅದನ್ನು ನಿವಾರಿಸಲು ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರಾದ ರಾಂದೇವ್ ಅವರು ಯಾವ ಭಾಗದಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂಬುದನ್ನು ನನ್ನಹತ್ತಿರ ಬಂದು ತಿಳಿಸಿದರೆ ನಾನು ತಕ್ಷಣ ಸರಿಪಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ರಾಂದೇವ್ ಅವರು ನಿರ್ದಿಷ್ಟವಾಗಿ ಯಾವ ಯಾವ ಜಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂಬುದನ್ನು ಹೇಳಿದ್ದಾರೆ ಆದೆನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಆ ಭಾಗಗಳಿಗೆ ನೀರಿನ ವ್ಯವಸ್ಥೆಯನ್ನು ಮಾಡಿಸಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ತಕ್ಷಣವೇ ನಾನು ಬಂದು ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಸಮಸ್ಯೆಯನ್ನು ಪರಿಹಾರ ಮಾಡುವ ಬಗ್ಗೆ ಭರವಸೆ ನೀಡಿರುವುದರಿಂದ ಮಾನ್ಯ ಸದಸ್ಯರು ಧರಣಿ ನಿಲ್ಲಿಸಿ ತಮ್ಮ ಜಾಗಕ್ಕೆ ಹಿಂದಿರುಗಬೇಕಾಗಿ ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀಪಿ.ರಾಂದೇವ್ ಅವರು ಧರಣಿ ನಿಲ್ಲಿಸಿ ತಮ್ಮ ಸ್ಥಾನಕ್ಕೆ ಹಿಂದಿರುಗಿದರು.)

CALLING ATTENTION TO MATTERS OF URGENT PUBLIC IMPORTANCE

(*i*) *re: The alleged assault on a S.C. lady Nandi Hobli, Papagni Matt on 2nd April 1979*

MR. SPEAKER.—We will take up the Calling Attention of Sri Michael B. Fernandes after some time.

SMT. RENUKA RAJENDRAN (Chikkballapur).—Sir, I call the attention of the Chif Minister to the assault on a Scheduled Caste lady at Nandi Hobli Papagni Mutt, Chikkaballapur taluk on 2nd April 1979.

SRI D. DEVARAJ URS (Chief Minister).—I wish to make the following Statement.

Papagni Mutt, which is in the jurisdiction of Chikkballapur Rural Police Station is run by the Viswakarma Sangha at Kalawara village. The land belongs to the said mutt. One Thimmachary is the President of the said Sangha and he is assisted by Shamachari and others, residents of Chickkballapur Town. There are some rooms which are constructed by the devotees of the said mutt with the co.-operation of the mutt management for the use of the mutt. One Munilaxmamma is residing in one of the rooms offering pooja etc since about 6 years. She is a nun and she was allowed to stay there by the previous Archak who died about 3 years back. Since the devotees who constructed the room requested the management of the mutt to instal idols of 'Navagraha' in the said room, the management requested Smt. Munilaxmamma to vacate the said room. She has not vacated the room so far.